ಎ-330-(51)

# ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

***ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಆರ್.ಬಿ.ತಿಮ್ಮಾಪುರ ಇವರು ನಿಯಮ 330 ರಡಿಯಲ್ಲಿ ನೀಡಿರುವ ಸೂಚನಾ ಪತ್ರ***

*****

**ವಿಷಯ:-**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯ ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ಬಾಲಕ / ಬಾಲಕಿಯರ ವಸತಿನಿಲಯಗಳಿಗೆ ಆಹಾರ, ತರಕಾರಿ, ಇತರ ಸಾಮಾಗ್ರಿಗಳ ಪೂರೈಕೆಗೆ ನಡೆದ ತಾಲ್ಲೂಕುವಾರು ಇ-ಟೆಂಡರ್‌ನಲ್ಲಿ ಎಲ್-1 ಇದ್ದವರಿಗೆ ಟೆಂಡರ್ ನೀಡದೆ ನಿಯಮ ಮೀರಿ ಖಾಸಗಿಯವರಿಗೆ ಟೆಂಡರ್ ನೀಡಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗಿರುವುದನ್ನು ತನಿಖೆಗೆ ಒಳಪಡಿಸಿ, ಟೆಂಡರ್‌ನ್ನು ರದ್ದುಪಡಿಸಿ, ಅರ್ಹ ಎಲ್-1 ಇದ್ದವರಿಗೆ ಟೆಂಡರ್ ನೀಡಬೇಕೆನ್ನುವ ವಿಷಯದ ಬಗ್ಗೆ.

**ನಿಯಮ 330ರಡಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ:**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯ ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ಬಾಲಕ / ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಆಹಾರ, ತರಕಾರಿ ಹಾಗೂ ಇತರೆ ಸಾಮಗ್ರಿಗಳ ಸರಬರಾಜುದಾರರ ಆಯ್ಕೆಗೆ ಸಂಬಂಧಿಸಿದಂತೆ, ಸರ್ಕಾರದ ಆದೇಶ ಸಂ.ಹಿಂವಕ 586 ಬಿಎಂಎಸ್ 2018, ದಿನಾಂಕ 07.04.2018ರಲ್ಲಿ ಸಮಿತಿಯನ್ನು ರಚಿಸಿದ್ದು, ಅದರಂತೆ, ಜಿಲ್ಲಾಮಟ್ಟದ ಆಹಾರ ಪದಾರ್ಥಗಳ ಖರೀದಿ ಸಮಿತಿಗೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದು, ಟೆಂಡರ್ ಅಂಗೀಕರಿಸುವ ಪ್ರಾಧಿಕಾರಿಯಾಗಿರುತ್ತಾರೆ. ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಸದರಿ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿದ್ದು, ಟೆಂಡರ್ ಕರೆಯುವ ಪ್ರಾಧಿಕಾರಿಗಳಾಗಿರುತ್ತಾರೆ. ಅಂತಿಮವಾಗಿ ಟೆಂಡರ್ ಷರತ್ತುಗಳನ್ವಯ ಅರ್ಹಗೊಂಡ ಟೆಂಡರ್‌ದಾರರಿಗೆ ಸರಬರಾಜು ಆದೇಶವನ್ನು ನೀಡಲಾಗುತ್ತಿದೆ.

2019-20ನೇ ಸಾಲಿನಲ್ಲಿ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಆಹಾರ, ತರಕಾರಿ ಹಾಗೂ ಇತರೆ ಸಾಮಗ್ರಿಗಳ ಸರಬರಾಜಿಗೆ ಸಂಬಂಧಿಸಿದಂತೆ, 30 ಜಿಲ್ಲೆಗಳ ಪೈಕಿ 25 ಜಿಲ್ಲೆಗಳಲ್ಲಿ ಅರ್ಹ ಎಲ್-1 ಟೆಂಡರ್‌ದಾರರನ್ನೇ ಆಯ್ಕೆ ಮಾಡಲಾಗಿರುತ್ತದೆ.

ಇನ್ನುಳಿದಂತೆ, 5 ಜಿಲ್ಲೆಗಳಲ್ಲಿ ಎಲ್-1 ಟೆಂಡರ್‌ದಾರರ ಬದಲಿಗೆ ಎಲ್-2 ಟೆಂಡರ್‌ದಾರರಿಗೆ ಸರಬರಾಜು ಆದೇಶವನ್ನು ನೀಡಲಾಗಿದ್ದು, ವಿವರಣೆಗಳು ಕೆಳಕಂಡಂತಿವೆ.

| ಕ್ರ. ಸಂ. | ಜಿಲ್ಲೆಯ ಹೆಸರು | ವಿವರಣೆ |
|---|---|---|
| 1 | ಶಿವಮೊಗ್ಗ | ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕಿಗೆ ಸಂಬಂಧಿಸಿದಂತೆ, ಎಲ್-1 ಟೆಂಡರ್‌ದಾರರಾದ ಮೆ: ಎಲ್.ವಿ ಟ್ರೇಡರ್ಸ್, ಸಾಗರ ಇವರು ವ್ಯವಹಾರಿಕ ಕಾರಣಗಳಿಂದಾಗಿ ಟೆಂಡರ್ ಭಾಗವಹಿಸುವಿಕೆಯನ್ನು ಹಿಂದಕ್ಕೆ ಪಡೆದಿರುವುದಾಗಿ ಲಿಖಿತದ ಮೂಲಕ ತಿಳಿಸಿರುವ ಕಾರಣ, ಎಲ್-2 ಟೆಂಡರ್‌ದಾರರಾದ ಮೆ:ಅವಿನಾಶ್ ಎಂಟರ್ ಪ್ರೈಸಸ್, ಶಿವಮೊಗ್ಗ ಇವರಿಗೆ ಆಹಾರ ಸರಬರಾಜು ಆದೇಶವನ್ನು ನೀಡಲಾಗಿರುತ್ತದೆ. |
| 2 | ಹಾವೇರಿ | ಹಾವೇರಿ ಜಿಲ್ಲೆ, ರಾಣೆಬೆನ್ನೂರ ತಾಲ್ಲೂಕಿಗೆ ಸಂಬಂಧಿಸಿದಂತೆ, ಎಲ್-1 ಟೆಂಡರ್ ದಾರರಾದ ಮೆ:ಎಲ್.ವಿ ಟ್ರೇಡರ್ಸ್, ಸೊರಬ ಇವರು ನಮೂದಿಸಿರುವ ದರಗಳು ಮಾರ್ಕೆಟ್ ದರಗಳಿಗಿಂತ **ಅತ್ಯಂತ ಕಡಿಮೆ ದರಗಳಾಗಿದ್ದು,** ಸದರಿಯವರು ನಮೂದಿಸಿದ ದರಗಳಲ್ಲಿ ಗುಣಮಟ್ಟದ ಆಹಾರ ಸಾಮಗ್ರಿಗಳನ್ನು ವಿದ್ಯಾರ್ಥಿನಿಲಯಕ್ಕೆ ಸರಬರಾಜು ಮಾಡುವುದು ಅಸಾಧ್ಯವಾಗಿರುವ ಕಾರಣ, ಸದರಿಯವರ ದರಗಳನ್ನು ಟೆಂಡರ್ ನಿಬಂಧನೆಗಳಂತೆ ತಿರಸ್ಕರಿಸಿ, ಎಲ್-2 ಟೆಂಡರ್ ದಾರರಾದ ಕೆ.ಎಸ್.ಸಿ.ಸಿ.ಎಫ್, ಬೆಂಗಳೂರು ಇವರ ದರಗಳನ್ನು ಟೆಂಡರ್ ಸಮಿತಿ ಒಪ್ಪಿ ಆಹಾರ ಸರಬರಾಜು ಆದೇಶ ನೀಡಲಾಗಿರುತ್ತದೆ. |
| 3 | ಬಾಗಲಕೋಟೆ | ಟೆಂಡರ್‌ದಾರರು (Karnataka State Co-operative consumer Federation Ltd.,) ಟೆಂಡರ್ ಪಡೆಯಬೇಕು ಎಂಬ ಏಕೈಕ ಉದ್ದೇಶದಿಂದ ಮಾರುಕಟ್ಟೆ ದರಕ್ಕಿಂತ ಅತೀ ಕಡಿಮೆ ದರ ನಮೂದಿಸಿದ್ದರಿಂದ ಎರಡು ಸಲ ಟೆಂಡರ್ ರದ್ದಾಗಿದ್ದು, ಟೆಂಡರ್ ದಾಖಲಾತಿಯ ನಿಬಂಧನೆ **ಸಂ.5** ರಡಿ ಮಾರುಕಟ್ಟೆ ದರಕ್ಕಿಂತ ಶೇ.30 ರಷ್ಟು ಹೆಚ್ಚು ಅಥವಾ ಕಡಿಮೆ ದರಗಳನ್ನು ನಮೂದಿಸಿರುವ ಟೆಂಡರ್ ದಾರರನ್ನು ತಿರಸ್ಕರಿಸಿ, ಉಳಿದ ಟೆಂಡರ್‌ದಾರದಲ್ಲಿ ಟೆಂಡರ್ ದಾಖಲಾತಿಯ ನಿಬಂಧನೆ **ಸಂ.6** ರಡಿ ಅರ್ಹ ಟೆಂಡರ್‌ದಾರರನ್ನು ಮಾರುಕಟ್ಟೆ ದರದೊಂದಿಗೆ ತುಲನಾತ್ಮಕವಾಗಿ ಪರಿಗಣಿಸಿ, ಪ್ರಭು ಟ್ರೇಡಿಂಗ್ ಕಾರ್ಪೋರೇಷನ್, ಬಾಗಲಕೋಟೆ ಇವರನ್ನು ಎಲ್-1 ಎಂದು ಜಿಲ್ಲಾ ಟೆಂಡರ್ ಸಮಿತಿ ನಿರ್ಧರಿಸಿದ್ದು, ಸದರಿಯವರಿಗೆ ಆಹಾರ ಸರಬರಾಜು ಆದೇಶ ನೀಡಲಾಗಿರುತ್ತದೆ. |
| 4 | ಬೀದರ್ | ಬೀದರ್ ಜಿಲ್ಲೆಗೆ ಸಂಬಂಧಿಸಿದಂತೆ, ಎಲ್-1 ಟೆಂಡರ್ ದಾರರಾದ M/s.Karnataka State Co-operative consumer Federation Ltd. Bangalore ಮತ್ತು ಎಲ್-2 ಟೆಂಡರ್ ದಾರರಾದ M/s. Venkateshwar Trading Company, Basavakalyana ಇವರಿಗಿಂತ **M/s.Basaveshwar Enterprises, Bidar ಇವರು ನಮೂದಿಸಿರುವ ದರಗಳು ಶೇ.14.45% ಇದ್ದು, ಅಂದರೆ ಮಾರುಕಟ್ಟೆಯ ದರದ ಶೇ.15% ರೊಳಗೆ ಇರುವುದರಿಂದ, ಸದರಿಯವರಿಗೆ ಆಹಾರ ಸರಬರಾಜು ಮಾಡಲು ಜಿಲ್ಲಾ ಟೆಂಡರ್ ಸಮಿತಿ ನಿರ್ಧರಿಸಿದ್ದು, ಸರಬರಾಜು ಆದೇಶ ನೀಡಲಾಗಿರುತ್ತದೆ.** |

| | | |
|---|---|---|
| 5 | ಚಿತ್ರದುರ್ಗ | ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದಂತೆ, ಜಿಲ್ಲಾಮಟ್ಟದ ಖರೀದಿ ಸಮಿತಿ ಸಭೆಯಲ್ಲಿ ತಾಂತ್ರಿಕವಾಗಿ ಅರ್ಹವಿರುವ ದರಗಳನ್ನು ತಾಲ್ಲೂಕಿನ ಒಟ್ಟಾರೆ ಬೇಡಿಕೆಗೆ ಗುಣಿಸಿ ಮಾರುಕಟ್ಟೆ ದರಗಳಿಗೆ ಸಮೀಪದ ದರ ನಮೂದಿಸಿರುವ (ಶೇ.15ಕ್ಕಿಂತ ಕಡಿಮೆ) ಈ ಕೆಳಕಂಡ ಟಂಡರ್‌ದಾರರಿಗೆ ಆಹಾರ ಸರಬರಾಜು ಮಾಡಲು ಜಿಲ್ಲಾ ಟೆಂಡರ್ ಸಮಿತಿ ನಿರ್ಧರಿಸಿದ್ದು, ಸರಬರಾಜು ಆದೇಶ ನೀಡಲಾಗಿರುತ್ತದೆ.<br><br>1) ಮೆ:ಸಾಯಿ ಟ್ರೇಡರ್ಸ್ ಬೇಳೂರು, ಸಾಗರ – ಚಿತ್ರದುರ್ಗ ತಾಲ್ಲೂಕು<br>2) ರಂಗನಾಥ ಎಂಟರ್ ಪ್ರೈಸಸ್, ಬಳ್ಳಾರಿ – ಮೊಳಕಾಲ್ಮೂರು ತಾಲ್ಲೂಕು<br>3) ಟಿ.ಎ.ಪಿ.ಸಿ.ಎಂ.ಎಸ್, ಚಿತ್ರದುರ್ಗ – ಹೊಸದುರ್ಗ ಮತ್ತು ಹೊಳಲ್ಕೆರೆ ತಾಲ್ಲೂಕು<br>4) ರಂಗನಾಥ ಎಂಟರ್ ಪ್ರೈಸಸ್, ಬಳ್ಳಾರಿ – ಹಿರಿಯೂರು ತಾಲ್ಲೂಕು<br>5) ಕೆ.ಸಿ.ಸಿ.ಎಫ್, ಚಿತ್ರದುರ್ಗ – ಚಳ್ಳಕೆರೆ ತಾಲ್ಲೂಕು. |

ಜಿಲ್ಲಾ ಟೆಂಡರ್ ಸಮಿತಿಯು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ ಮತ್ತು ನಿಯಮಗಳನ್ವಯ ಮೇಲೆ ಉಲ್ಲೇಖಿಸಿರುವ 5 ಜಿಲ್ಲೆಗಳಲ್ಲಿ ಟೆಂಡರ್ ಆಹ್ವಾನಿಸಿ, ನಿಯಮಾನುಸಾರ ಅರ್ಹ ಟೆಂಡರ್‌ದಾರರಿಗೆ ಆಹಾರ ಸರಬರಾಜು ಆದೇಶಗಳನ್ನು ನೀಡಿದೆ.

ಹಿಂವಕ 191 ಬಿಎಂಎಸ್ 2020

(ಬಿ.ಶ್ರೀರಾಮುಲು)

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ